( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ 03/02/2021

ಅಸಲು ದಾವೆ.ನಂ.180/2009

ಡಿ.ಡಬ್ಲ್ಯೂ1

( ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ.ವಿ.ಎನ್. ವಕೀಲರಿಂದ )

ತಿದ್ದುಪಡಿ ಪತ್ರ 2016 ರಲ್ಲಿ ನೋಂದಣಿಯಾಗಿರುತ್ತದೆ. ತಿದ್ದುಪಡಿ ಪತ್ರವನ್ನು ಅರುಣ ಎಂಬ ವಕೀಲರು ಬರೆದಿರುತ್ತಾರೆ. 2016 ನೇ ಸಾಲಿನಲ್ಲಿ ಅರುಣ್ ವಕೀಲರು ಈ ದಾವೆಯಲ್ಲಿ ನನ್ನ ಪರವಾಗಿ ಹಾಜರಾಗಿರುವ ವಕೀಲರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ತಿದ್ದುಪಡಿ ಪತ್ರದಲ್ಲಿ ಈ ದಾವೆಯ ಬಗ್ಗೆ ನಮೂದಿಸಿಲ್ಲ, ಹಿಂದೆ ಆದ ಕ್ರಯ ಪತ್ರದಲ್ಲಿ ವಿಸ್ತೀರ್ಣವನ್ನು ಸರಿ ಪಡಿಸಿ ತಿದ್ದುಪಡಿ ಪತ್ರವನ್ನು ಬರೆಯಲಾಗಿದೆ.. ಅಸಲು ದಾವಾ ನಂಃ 215/1999 ರ ದಾವೆಯ ಬಗ್ಗೆ ತಿದ್ದುಪಡಿ ಪತ್ರದಲ್ಲಿ ನಮೂದಿಸಿಲ್ಲ. ನಿಡಿ-2 ರ ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನಿಡಿ-4 ರ ಹಕ್ಕು ಬದಲಾವಣೆ ವಹಿಯಲ್ಲಿ ಛೇರ್ಮನ್ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರ ಸಹಿ ಇಲ್ಲ ಎಂದರೆ ಸರಿಯಲ್ಲ. ನಾನು 5 ವರ್ಷದ ಅವಧಿಗೆ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿದ್ದೇನು. ಕ್ರಯ ಪತ್ರದಲ್ಲಿನ ವಿಸ್ತೀರ್ಣವನ್ನು ನೋಡಿ ಕಟ್ಟಡ ನಿರ್ಮಾಣ ಪರವಾನಗಿಯನ್ನು ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜವರೇಗೌಡರ ಮಗ ಹುಚ್ಚೇಗೌಡ ನನ್ನ ಅಕ್ಕನ ಮಗ ಎಂದರೆ ಸರಿಯಲ್ಲ. ರಾಮನಾಥಪುರ ಗ್ರಾಮ ಪಂಚಾಯಿಯ ವ್ಯಾಪ್ತಿಯಲ್ಲಿ ನನಗೆ ಒಂದೆ ನಿವೇಶನವಿದ್ದು, ಅದರಲ್ಲಿ ಒಂದು ಮನೆ ಇದೆ.

ನಿಡಿ-29 ರಿಂದ 31 ರಲ್ಲಿ ದಿನಾಂಕ ನಮೂದಾಗಿಲ್ಲ ಮತ್ತು ಸರ್ವೆ ಅಧಿಕಾರಿಗಳು ಸಹಿ ಮತ್ತು ಸೀಲ್ ಹಾಕಿಲ್ಲ ಎಂದರೆ ಸಾಕ್ಷಿಯು ಸರ್ವೆ ಅಧಿಕಾರಿಗಳು ನೀಡಿದ ದಾಖಲೆಗಳನ್ನು ತಾನು ಹಾಜರು ಪಡಿಸಿದ್ದು, ಅದರಲ್ಲಿ ದಿನಾಂಕ ನಮೂದು ಪಡಿಸಬೇಕು ಮತ್ತು ಸೀಲ್ ಹಾಕಬೇಕು ಎಂದು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಈ ಸ್ವತ್ತು ಮಾಡುವಾಗ ಗ್ರಾಮ ಪಂಚಾಯಿತಿಯಿಂದ ಸದರಿ ದಾಖಲೆಗಳು ಪಿ.ಡಿ.ಓ.ಕಚೇರಿ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**